ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

**ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/04/ಐಡಿಪಿ/2017–18**

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ:24-10-2017

<u>ಸುತ್ತೋಲೆ</u>

ವಿಷಯ: ಜಾಗೃತಿ ಅರಿವು ಸಪ್ತಾಹವನ್ನು ಆಚರಿಸುವ ಕುರಿತು.
ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ137 ಸೇಲೋಯು2017 ದಿನಾಂಕ:03-10-2017

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂದಿಸಿದಂತೆ ದಿನಾಂಕ: 30-10-2017 ರಿಂದ 04-11-2017 ರ ವರೆಗೆ ಜಾಗೃತಿ ಅರಿವು ಸಪ್ತಾಹವನ್ನಾಗಿ **"ನನ್ನ ಗುರಿ- ಭ್ರಷ್ಟಾಚಾರ ಮುಕ್ತ ಭಾರತ"** ಎಂಬ ವಿಷಯದ ಮೇಲೆ ಆಚರಿಸಲು ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳಿಗೆ ಸೂಚಿಸಲಾಗಿದೆ.

ಸದರಿ ಸಪ್ತಾಹವನ್ನು ಪ್ರತಿಜ್ಞೆ (ಪ್ರತಿ ಲಗತ್ತಿಸಿದೆ) ತೆಗೆದುಕೊಳ್ಳುವುದರ ಮೂಲಕ ಆರಂಭಿಸಿ, ಭಿತ್ತಿ ಪತ್ರಗಳನ್ನು ಪ್ರದರ್ಶಿಸಿ ವಿಚಾರಘೋಷ್ಠಿಗಳನ್ನು ಆಯೋಜಿಸಿ, ಭಾಷಣಗಳನ್ನು, ಚರ್ಚಾ ಸ್ಪರ್ಧೆಗಳನ್ನು ಆಯೋಜಿಸಿ, ಗ್ರಾಮ ಸಭೆಗಳಲ್ಲಿ ಅರಿವು ಮೂಡಿಸಿ, ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ (ಪ್ರತಿ ಲಗತ್ತಿಸಿದೆ) ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಗಿದೆ.

ಸಪ್ತಾಹದ ಸಂಪೂರ್ಣ ವಿವಿರಣೆಯುಳ್ಳ ಮಾಹಿತಿಯನ್ನು ನಮೂನೆಯಲ್ಲಿರುವಂತೆ (ಪ್ರತಿ ಲಗತ್ತಿಸಿದೆ) ತಯಾರಿಸಿ ನಿರ್ದೇಶನಾಲಯಕ್ಕೆ ಅಂಚೆ ಮೂಲಕ ಮತ್ತು ಪ್ರತಿಯನ್ನು <u>nssdte@gmail.com</u> ಗೆ ನವೆಂಬರ್ 10 ರ ಒಳಗಾಗಿ ಕಳುಹಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

ನಿರ್ದೇಶಕರು

1. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಪ್ರಾಚಾರ್ಯರಗಳಿಗೆ–ಸೂಕ್ತ ಕ್ರಮಕ್ಕಾಗಿ.
2. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ನಿರ್ದೇಶಕರು ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ, ಬಸವನಗುಡಿ, ಬೆಂಗಳೂರು–04.
4. ಇ–ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
5. ಕಛೇರಿ ಕಡತಕ್ಕೆ.

## ಪ್ರತಿಜ್ಞೆ

ನಮ್ಮ ದೇಶದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಅಭಿವೃದ್ಧಿಗೆ ಭ್ರಷ್ಟಾಚಾರವು ಒಂದು ಪ್ರಮುಖ ಅಡಚಣೆಯಾಗಿದೆಯೆಂದು ನಾನು ನಂಬುತ್ತೇನೆ. ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಸರ್ಕಾರ, ನಾಗರಿಕರು ಮತ್ತು ಖಾಸಗಿ ವಲಯದಂತಹ ಎಲ್ಲಾ ಪಾಲುದಾರರು ಒಟ್ಟಾಗಿ ಕೆಲಸ ಮಾಡಬೇಕಾಗುತ್ತದೆಂದು ನಾನು ನಂಬುತ್ತೇನೆ. ಪ್ರತಿ ನಾಗರಿಕನು ಜಾಗರೂಕನಾಗಿದ್ದು, ಎಲ್ಲಾ ಸಮಯದಲ್ಲೂ ಉನ್ನತ ಗುಣಮಟ್ಟದ ಪ್ರಾಮಾಣಿಕತೆ ಮತ್ತು ನಿಷ್ಠೆಗೆ ಬದ್ಧನಾಗಿರಬೇಕೆಂದು ಹಾಗೂ ಭ್ರಷ್ಟಾವಾರದ ವಿರುದ್ಧ ಹೋರಾಟವನ್ನು ಬೆಂಬಲಿಸಬೇಕೆಂದು ನಾನು ಅರಿತಿದ್ದೇನೆ.

ಆದ್ದರಿಂದ, ನಾನು ಈ ರೀತಿ ಪ್ರತಿಜ್ಞೆ ಮಾಡುತ್ತೇನೆ:-

- ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಪ್ರಮಾಣಿಕತೆ ಮತ್ತು ಕಾನುನಿನ ನಿಯಮಗಳನ್ನು ಅನುಸರಿಸುತ್ತೇನೆ;
- ಲಂಚವನ್ನು ಪಡೆಯುವುದಿಲ್ಲ ಹಾಗೂ ನೀಡುವುದೂ ಇಲ್ಲ;
- ಎಲ್ಲಾ ಕಾರ್ಯಗಳನ್ನು ಪ್ರಾಮಾಣಿಕ ಮತ್ತು ಪಾರದರ್ಶಕ ರೀತಿಯಲ್ಲಿ ನಿರ್ವಹಿಸುತ್ತೇನೆ;
- ವ್ಯಯಕ್ತಿಕ ನಡವಳಿಕೆಯಲ್ಲಿ ನಿಷ್ಠೆ ಪ್ರದರ್ಶಿಸುವ ಮೂಲಕ ಮಾದರಿಯಾಗಿರುತ್ತೇನೆ;
- ಯಾವೂದೇ ಭ್ರಷ್ಟಾಚಾರದ ಘಟನೆಯನ್ನು ಸೂಕ್ತ ಸಂಸ್ಥೆಗೆ ವರದಿ ಮಾಡುತ್ತೇನೆ.

**************************

ಸಹಯೋಗ ಪಡೆಯಬಹುದಾದಂತಹ ಸರ್ಕಾರ/ಸರ್ಕಾರೇತರ ಸಂಸ್ಥೆಗಳ ವಿವರ

| ಕ್ರ.ಸಂ | ಸ್ಥಳ | ಸರ್ಕಾರ/ಸರ್ಕಾರೇತರ ಸಂಸ್ಥೆಗಳು |
|---|---|---|
| 1. | Bidar | SBI |
| 2. | Belgaum | Union bank of India Corporation Bank, Syndicate Bank Vijaya Bank, BEML |
| 3. | Bangaluru | Corporation Bank, Bharat Electronics, Hindustan AeronauticsSyndicate Bank, Canara Bank Vijaya Bank BEML |
| 4. | Gulbarga | Corporation Bank, Syndicate Bank,Vijaya Bank |
| 5. | Hubli-Dharwad | Bank of Maharashtra, Canara Bank, Vijaya Bank |
| 6. | Mysore | Corporation Bank, Canara Bank, VIjaya Bank, BEML |
| 7. | Mangalore | Corporation Bank, Syndicate Bank MRPL |
| 8. | Raichur | NABARD, PGCIL |
| 9. | Suratkal | SBI |
| 10. | Yelhanka | Railways |

ಸೂಚನೆ:- ಮೇಲಿನ ಕೋಷ್ಟಕದ ಹೊರತಾಗಿರುವ ಸ್ಥಳಗಳ ಪಾಲಿಟೆಕ್ನಿಕ್‌ಗಳು ತಮಗೆ ಅನುವಾಗುವ ಸ್ಥಳ/ ಸಂಸ್ಥೆಗಳ ಸಹಯೋಗದೊಂದಿಗೆ ಅಥವಾ ತಮ್ಮ ಪಾಲಿಟೆಕ್ನಿಕ್ ಹಂತದಲ್ಲಿಯೇ ಆಯೋಜಿಸಲು ಸೂಚಿಸಿದೆ.